328 ಶ್ರೀ ಗೋಪಾಲ ಭಂಡಾರಿ. ಹೆಚ್. : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರಿಗೆ ಒದಗಿಸಲಾಗುವ ಕೃಷಿ ಯಂತ್ರೋಪಕರಣಕ್ಕೆ ಸಿಗಲಿರುವ ಸಹಾಯ ಧನವನ್ನು ನೇರವಾಗಿ ಅವರ ಖಾತೆಗೆ ಕಳುಹಿಸದೇ ಇರಲು ಕಾರಣವೇನು;

ಆ) ಯಂತ್ರೋಪಕರಣಗಳ ವಿತರಕರಿಗೆ ಸಹಾಯ ಧನವನ್ನು ನೇರವಾಗಿ ಬಿಡುಗಡೆ ಮಾಡಲಾಗುತ್ತಿದೆಯೇ; ನೇರವಾಗಿ ವಿತರಣೆಗಾರರಿಗೆ ಬಿಡುಗಡೆ ಮಾಡುವುದರಿಂದ ಭಷ್ಟಾಚಾರಕ್ಕೆ ಅವಕಾಶವಾಗುತ್ತಿಲ್ಲವೇ;

ಇ) ಈ ಮೊದಲಿನ ಆದೇಶದಂತೆ ವಿತರಣೆಯಾದ ಬಗ್ಗೆ ರೈತರಿಗೆ ಸಹಾಯ ಧನ ಒದಗಿಸಲು ಬಾಕಿ ಇದೆಯೇ (ವಿವರ ನೀಡುವುದು)?

ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು) :

ಅ) ರೈತರು ಯಂತ್ರೋಪಕರಣಗಳನ್ನು ಪೂರ್ತಿ ಹಣ ನೀಡಿ ಖರೀದಿಸಿದಲ್ಲಿ ಸಹಾಯಧನವನ್ನು ರೈತರಿಗೆ ನೇರವಾಗಿ ಅವರ ಖಾತೆಗೆ ನೀಡಲಾಗುತ್ತಿದೆ.

ಆ) ಯಂತ್ರೋಪಕರಣಗಳ ವಿತರಕರಿಗೆ ರೈತರು, ರೈತರ ವಂತಿಕೆಯನ್ನು ಮಾತ್ರ ನೀಡಿದ್ದಲ್ಲಿ ಸಹಾಯಧನವನ್ನು ಯಂತ್ರೋಪಕರಣ ವಿತರಕರಿಗೆ ಬಿಡುಗಡೆ ಮಾಡಲಾಗುತ್ತಿದೆ. ರೈತರು ಪೂರ್ಣ ಮೊತ್ತವನ್ನು ನೀಡಿ ಸವಲತ್ತನ್ನು ಖರೀದಿಸಿದಲ್ಲಿ ಸಹಾಯಧನವನ್ನು ರೈತರಿಗೆ ನೇರವಾಗಿ ನೀಡಲಾಗುತ್ತಿದೆ. ರೈತರು ಸವಲತ್ತನ್ನು ಖರೀದಿಸಿ, ತೃಪ್ತಿಕರ ಪ್ರಮಾಣ ಪತ್ರ ನೀಡಿದ ನಂತರವೇ ಅಗತ್ಯ ದಾಖಲಾತಿಗಳನ್ನು ರೈತರಿಂದ ಹಾಗೂ ಸರಬರಾಜುದಾರರಿಂದ ಪಡೆದು ಕ್ಷೇತ್ರಮಟ್ಟದಲ್ಲಿ ಸರಬರಾಜಾದ ಸವಲತ್ತನ್ನು ಪರಿಶೀಲಿಸಿದ ನಂತರ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.

ಇ) ದಿನಾಂಕ: 30–08–2008ರ ಆದೇಶದಂತೆ ರೈತರು ಪೂರ್ಣ ಮೊತ್ತವನ್ನು ನೀಡಿ ಖರೀದಿಸಿದ ಯಂತ್ರೋಪಕರಣಗಳಿಗೆ ರೈತರಿಗೆ ಸಹಾಯ ಧನವನ್ನು ಒದಗಿಸಲು ಯಾವುದೇ ಬಾಕಿ ಇರುವ ಬಗ್ಗೆ ವರದಿಗಳು ಇರುವುದಿಲ್ಲ.